**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 459/2018**

**CW- 5** **PW:4**

| | |
|---|---|
| ಸಾಕ್ಷಿಯ ಹೆಸರು | ಃ ಸೀಮಾ ಸರೂರ |
| ತಂದೆ /ಗಂಡನ ಹೆಸರು | ಃ ನಾಗೇಶ |
| ವಯಸ್ಸು | ಃ 41 ವರ್ಷ |
| ಉದ್ಯೋಗ | ಃ ಮುಥೂಟ್ ಫೈನಾನ್ಸ ಮ್ಯಾನೇಜರ್ |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **15.05.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸೆಪ್ಟೆಂಬರ್ 2011 ರಿಂದ ಡಿಸೆಂಬರ್ 2012 ವರೆಗೆ ಮುಥೂಟ್ ಫೈನಾನ್ಸ ನವನಗರ ಶಾಖೆಯಲ್ಲಿ ಅಸಿಸ್ಟಂಟ್ ಮಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2012 ನೇ ಇಸವಿಯಲ್ಲಿ ಆರೋಪಿ ನಂ.1 ಮತ್ತು 2 ಆರು ಬಾರಿ ನಮ್ಮ ಬ್ಯಾಂಕಿಗೆ ಬಂದು ಬಂಗಾರದ ಮೇಲೆ ಸಾಲ ಕೇಳಿಕೊಂಡು ಬಂದಿದ್ದರು. ನಾನು ಬಂಗಾರದ ಆಭರಣಗಳು ಹಾಗೂ ದಾಖಲೆಗಳನ್ನು ಪರಿಶೀಲನೆ ಮಾಡಿ ನಮ್ಮ ಶಾಖೆ ವತಿಯಿಂದ 2012 ರಲ್ಲಿ ಆರೋಪಿ ನಂ.1 ಈತನು ದಿಃ 08.11.2012 ರಂದು ಖಾತೆ ಸಂಖ್ಯೆ ಎಮ್ ಇ ಎಲ್ 2470 ಮುಖಾಂತರ 39,000/- ರೂಗಳನ್ನು ಸಾಲವಾಗಿ ಪಡೆದು ಒಂದು ಬಂಗಾರದ ಚೈನ್, ಒಂದು ಬಂಗಾರ ಉಂಗುರ ಹಾಗೂ ಸುಮಾರು 20.3 ಗ್ರಾಮದ ಅಡವಿಟ್ಟಿರುತ್ತಾರೆ. ದಿಃ 17.11.2012 ರಂದು ಆರೋಪಿ ನಂ.2 ಈತನು ಖಾತೆ ಸಂಖ್ಯೆ ಎಮ್ ಇ ಎಲ್ 2503 ಮುಖಾಂತರ 25,000/- ರೂಗಳನ್ನು ಸಾಲವಾಗಿ ಪಡೆದು ಸುಮಾರು 12 ಗ್ರಾಮದ ಒಂದು ಬಂಗಾರ ಉಂಗುರ ಅಡವಿಟ್ಟಿರುತ್ತಾರೆ. 2013 ರಲ್ಲಿ ಪೊಲಿಸರು ನಮ್ಮ ಬ್ಯಾಂಕಿಗೆ ಬಂದು ತಿಳಿಸಿದಾಗ ಆರೋಪಿ ನಂ.1 ಮತ್ತು 2 ನಮ್ಮ ಬ್ಯಾಂಕಿನಲ್ಲಿ ಅಡವಿಟ್ಟ ಬಂಗಾರದ ಆಭರಣಗಳು ಕಳ್ಳತನ ಮಾಡಿದ ಆಭರಣಗಳಾಗಿರುತ್ತವೆಂದು ನಮಗೆ ಗೊತ್ತಾಯಿತು. ಕಳುವಾದ ಆಬರಣಗಳು ಆದಕಾರಣ ಸದರಿ ಆಭರಣಗಳನ್ನು ಪೊಲಿಸರು ಪಂಚನಾಮೆಯನ್ನು ಜರುಗಿಸಿ ವಶಕ್ಕೆ ಪಡೆದುಕೊಂಡರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೆ ಒಂದು ಬಾರಿ ನಮ್ಮ ಬ್ಯಾಂಕಿನಲ್ಲಿ ನನ್ನ ಹತ್ತಿರ ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲ ಪಡೆದ ವ್ಯಕ್ತಿಯಾಗಿರುತ್ತಾನೆ. ಈ ವಿಷಯದ ಬಗ್ಗೆ ನಾನು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರಿಗೆ ಸಾಲ ನೀಡುವ

ಸಮಯದಲ್ಲಿ ಅವರ ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಹಾಗೂ ಚಾಲನಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತದೆ. ಆರೋಪಿ ನಂ.1 ಮತ್ತು 2 ಇಬ್ಬರು ಸೇರಿ ನಮ್ಮ ಬ್ಯಾಂಕಿನಲ್ಲಿ ಬಂಗಾರದ ಆಬರಣಗಳನ್ನು ಅಡವಿಟ್ಟು 9 ಲಕ್ಷಗಳಷ್ಟು ಸಾಲ ಪಡೆದಿರುತ್ತಾರೆ. ಆರೋಪಿತರು ಸುಳ್ಳು ಹೇಳಿ ನಮ್ಮ ಬ್ಯಾಂಕಿಗೆ ಮೋಸ ಹಾಗೂ ವಂಚನೆ ಮಾಡಿರುತ್ತಾರೆ. ಅದರಿಂದ ನಮ್ಮ ಬ್ಯಾಂಕಿಗೆ ನಷ್ಟ ಉಂಟಾಗಿರುತ್ತದೆ.

**ಪಾಟಿಸವಾಲುಃ ಆರೋಪಿ ನಂ.1 ಪರ ವಕೀಲರು ಗೈರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**